# ಸಾರ್ವಜನಿಕ ಸ್ವತ್ತಿನ ಹಾನಿ ನಿವಾರಣಾ ಅಧಿನಿಯಮ, 1984

(1984ರ ಸಂಖ್ಯೆ 3)

[16ನೇ ಮಾರ್ಚ್ 1984]

ಸಾರ್ವಜನಿಕ ಸ್ವತ್ತಿನ ಹಾನಿಯನ್ನು ನಿವಾರಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಸಾರ್ವಜನಿಕ ಸ್ವತ್ತಿನ ಹಾನಿ ನಿವಾರಣಾ ಅಧಿನಿಯಮ, 1984 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 28ನೇ ಜನವರಿ, 1984 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ಕೇಡು" ಎಂಬುದು ಭಾರತ ದಂಡ ಸಂಹಿತೆಯ (1860ರ 45) 425ನೇ ಪ್ರಕರಣದಲ್ಲಿರುವಂತಹದೇ ಅರ್ಥವನ್ನು ಹೊಂದಿರತಕ್ಕುದು;

(ಬಿ) "ಸಾರ್ವಜನಿಕ ಸ್ವತ್ತು" ಎಂದರೆ,-

(i) ಕೇಂದ್ರ ಸರ್ಕಾರದ; ಅಥವಾ

(ii) ಯಾವುದೇ ರಾಜ್ಯ ಸರ್ಕಾರದ; ಅಥವಾ

(iii) ಯಾವುದೇ ಸ್ಥಳೀಯ ಪ್ರಾಧಿಕಾರದ; ಅಥವಾ

(iv) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮದ;

(v) ಕಂಪನಿಗಳ ಅಧಿನಿಯಮ, 1956ರ (1956ರ 1) 617ನೇ ಪ್ರಕರಣದಲ್ಲಿ ಪರಿಭಾಷಿಸಲಾದಂಥ ಯಾವುದೇ ಕಂಪನಿಯ; ಅಥವಾ

(vi) ಕೇಂದ್ರ ಸರ್ಕಾರವು, ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಸಂಸ್ಥೆಯ, ವ್ಯಾಪಾರ ಸಂಸ್ಥೆಯ ಅಥವಾ ಉದ್ಯಮದ

-ಒಡೆತನದಲ್ಲಿರುವ ಅಥವಾ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ (ಯಂತ್ರ ಸಾಮಗ್ರಿ ಸೇರಿದಂತೆ) ಯಾವುದೇ ಚರ ಅಥವಾ ಸ್ಥಿರ ಸ್ವತ್ತು:

ಪರಂತು, ಯಾವುದೇ ಸಂಸ್ಥೆ, ವ್ಯಾಪಾರ ಸಂಸ್ಥೆ ಅಥವಾ ಉದ್ಯಮವು, ಕೇಂದ್ರ ಸರ್ಕಾರವು ಅಥವಾ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ಅಥವಾ ಭಾಗಶಃ ಕೇಂದ್ರ ಸರ್ಕಾರ ಮತ್ತು ಭಾಗಶಃ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒದಗಿಸಿರುವ ನಿಧಿಗಳ ಮೂಲಕ ಪೂರ್ಣವಾಗಿ ಅಥವಾ ಬಹುಮಟ್ಟಿಗೆ ಆರ್ಥಿಕ ನೆರವು ಪಡೆದ ಹೊರತು ಅಂಥ ಸಂಸ್ಥೆ, ವ್ಯಾಪಾರ ಸಂಸ್ಥೆ ಅಥವಾ ಉದ್ಯಮವನ್ನು, ಕೇಂದ್ರ ಸರ್ಕಾರವು, ಈ ಉಪಖಂಡದ ಮೇರೆಗೆ ನಿರ್ದಿಷ್ಟಪಡಿಸತಕ್ಕುದಲ್ಲ.

3. ಸಾರ್ವಜನಿಕ ಸ್ವತ್ತಿಗೆ ಹಾನಿಯನ್ನುಂಟು ಮಾಡುವ ಕೇಡು:- (1) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸ್ವರೂಪದ ಸಾರ್ವಜನಿಕ ಸ್ವತ್ತನ್ನು ಹೊರತುಪಡಿಸಿ, ಇತರ ಯಾವುದೇ ಸಾರ್ವಜನಿಕ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಕೃತ್ಯವನ್ನು ಮಾಡುವ ಮೂಲಕ ಕೇಡು ಮಾಡುವ ಯಾರೇ ಆಗಲಿ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

(2) ಯಾರೇ ಆಗಲಿ,-

(ಎ) ನೀರು, ಬೆಳಕು, ವಿದ್ಯುಚ್ಛಕ್ತಿ ಅಥವಾ ಶಕ್ತಿ ಇವುಗಳ ಉತ್ಪಾದನೆ, ವಿತರಣೆ ಅಥವಾ ಸರಬರಾಜಿನ ಸಂಬಂಧದಲ್ಲಿ ಉಪಯೋಗಿಸಲಾಗುವ ಯಾವುದೇ ಕಟ್ಟಡ, ಸ್ಥಾವರ ಅಥವಾ ಇತರ ಸ್ವತ್ತಾಗಿರುವ;

(ಬಿ) ಯಾವುದೇ ತೈಲ ಸ್ಥಾವರವಾಗಿರುವ;

(ಸಿ) ಯಾವುದೇ ಚರಂಡಿ ಕಾಮಗಾರಿಯಾಗಿರುವ;

(ಡಿ) ಯಾವುದೇ ಗಣಿ ಅಥವಾ ಕಾರ್ಖಾನೆಯಾಗಿರುವ;

(ಇ) ಸಾರ್ವಜನಿಕ ಸಾರಿಗೆಯ ಅಥವಾ ದೂರ ಸಂಪರ್ಕಗಳ ಯಾವುದೇ ಸಾಧನವಾಗಿರುವ ಅಥವಾ ಆ ಸಂಬಂಧದಲ್ಲಿ ಬಳಸಲಾದ ಯಾವುದೇ ಕಟ್ಟಡ, ಸ್ಥಾವರ ಅಥವಾ ಇತರ ಸ್ವತ್ತಾಗಿರುವ

-ಯಾವುದೇ ಸಾರ್ವಜನಿಕ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಕೃತ್ಯವನ್ನು ಮಾಡುವ ಮೂಲಕ ಕೇಡನ್ನು ಮಾಡಿದರೆ ಅವನು, ಆರು ತಿಂಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕುದು:

ಪರಂತು, ನ್ಯಾಯಾಲಯವು, ತನ್ನ ತೀರ್ಪಿನಲ್ಲಿ ಕಾರಣಗಳನ್ನು ದಾಖಲಿಸಿ, ಆರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ನೀಡಬಹುದು.

4. ಬೆಂಕಿ ಅಥವಾ ಸ್ಫೋಟಕ ವಸ್ತುವಿನ ಮೂಲಕ ಸಾರ್ವಜನಿಕ ಸ್ವತ್ತಿಗೆ ಹಾನಿಯನ್ನುಂಟು ಮಾಡುವ ಕೇಡು:- 3ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಬೆಂಕಿ ಅಥವಾ ಸ್ಫೋಟಕ ವಸ್ತುವಿನ ಮೂಲಕ ಅಪರಾಧವನ್ನು ಮಾಡುವ ಯಾರೇ ಆಗಲಿ, ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ, ಆದರೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕುದು:

ಪರಂತು, ನ್ಯಾಯಾಲಯವು ತನ್ನ ತೀರ್ಪಿನಲ್ಲಿ ವಿಶೇಷ ಕಾರಣಗಳನ್ನು ದಾಖಲಿಸಿ ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ನೀಡಬಹುದು.

5. ಜಾಮೀನಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು:- 3ನೇ ಪ್ರಕರಣ ಅಥವಾ 4ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಆಪಾದಿತನಾಗಿರುವ ಅಥವಾ ಅಪರಾಧ ನಿರ್ಣೀತನಾಗಿರುವ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಅವನ ಬಿಡುಗಡೆಗಾಗಿ ಸಲ್ಲಿಸಿರುವ ಅರ್ಜಿಯನ್ನು ವಿರೋಧಿಸಲು ಪ್ರಾಸಿಕ್ಯೂಷನ್ನಿಗೆ ಅವಕಾಶವನ್ನು ಕೊಟ್ಟಿರುವ ಹೊರತು, ಅವನನ್ನು ಜಾಮೀನಿನ ಮೇಲೆ ಅಥವಾ ಅವನ ಸ್ವಂತ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡತಕ್ಕುದಲ್ಲ.

6. ಉಳಿಸುವಿಕೆ:- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕುದೇ ಹೊರತು ಅವುಗಳನ್ನು ಅಲ್ಪೀಕರಿಸತಕ್ಕುದಲ್ಲ ಮತ್ತು ಈ ಅಧಿನಿಯಮದಲ್ಲಿರುವುದು ಯಾವುದೂ, ಯಾವನೇ ವ್ಯಕ್ತಿಯ ವಿರುದ್ಧ ಈ ಅಧಿನಿಯಮದಿಂದಲ್ಲದೆ (ತನಿಖೆಯ ರೂಪದಲ್ಲಿ ಅಥವಾ ಅನ್ಯಥಾ) ಹೂಡಬಹುದಾದ ಅಥವಾ ಕೈಗೊಳ್ಳಬಹುದಾದ ಯಾವುದೇ ವ್ಯವಹರಣೆಯಿಂದ ಅವನಿಗೆ ವಿನಾಯಿತಿ ನೀಡತಕ್ಕುದಲ್ಲ.

7. ನಿರಸನ ಮತ್ತು ಉಳಿಸುವಿಕೆ:- (1) ಸಾರ್ವಜನಿಕ ಸ್ವತ್ತಿನ ಹಾನಿ ನಿವಾರಣಾ ಅಧ್ಯಾದೇಶ, 1984 (1984ರ 3) -ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ಸದರಿ ಅಧ್ಯಾದೇಶವನ್ನು ನಿರಸನಗೊಳಿಸಿದ್ದಾಗ್ಯೂ, ಆದರ ಮೇರೆಗೆ ಮಾಡಲಾಗಿರುವ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

* * * * *

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1 ಕಾ.ಸೂ. ಪಿ.675 ಪ್ರ.6